ಊಟ ಮತ್ತು ಪ್ರಾಥಮಿಕ ಆರೋಗ್ಯ ಉಪಚಾರವಷ್ಟೇ ಅವಳಿಗೆ ಲಭ್ಯವಾಗುತ್ತಿದ್ದದ್ದು. ಅವಳು ತಪ್ಪಿಸಿಕೊಂಡು ಹೋಗದ ಹಾಗೆ ಕಾವಲು ಕಾಯಲು ಕಾವಲುಗಾರನನ್ನೂ ನೇಮಿಸಲಾಯಿತು. ಜುಲೈ 3ರಂದು ರೆಬೆಕಾ ಪ್ಲೇಗ್‌ನಿಂದ ತೀರಿಕೊಂಡಳು. ಆದರೆ ಅವಳ ಮಗ ಇನ್ನೂ ಜೀವಂತವಾಗಿದ್ದ. ಅವನೊಬ್ಬನನ್ನೇ ಮನೆಯಲ್ಲಿ ಕೂಡಿಹಾಕಲಾಯಿತು. ತಾಯಿ ತೀರಿಕೊಂಡ ಮರುದಿನ ಮಗನೂ ಪ್ಲೇಗ್ ಮಾರಿಗೆ ಬಲಿಯಾದ.

ಇದು ಕಾಕ್ ಆ್ಯಂಡ್ ಕೀ ಅಲೇ ಬೀದಿಯ ಕರಾಳ ದಿನಗಳ ಮೊದಲ ಕರೆಗಂಟೆಯಾಗಿತ್ತಷ್ಟೆ. ಅಲ್ಲಿಂದ ನಿಧಾನಕ್ಕೆ ಒಬ್ಬರಿಂದ ಇನ್ನೊಬ್ಬರಿಗೆ ರೋಗ ಹಬ್ಬುತ್ತಲೇ ಹೋಯಿತು. ಜೂನ್ 28ರಂದು, ಸಮಾಧಿಗೆ ಹೊಂಡ ತೆಗೆಯುವ ವಿಲಿಯಮ್ ಪೆನ್ನಿಯ ಎಡಕಂಕುಳಲ್ಲಿ ಗಡ್ಡೆ ಕಾಣಿಸಿಕೊಂಡಿತು. ಹೆಂಡತಿ, ಇಬ್ಬರು ಮಕ್ಕಳೊಟ್ಟಿಗೆ ಅವನನ್ನೂ ಮನೆಯೊಳಗೆ ಕೂಡಿಹಾಕಿ ಹೊರಗಿನಿಂದ ಬೀಗ ಜಡಿಯಲಾಯಿತು. ಆದರೆ ಅವನ ಹಿರಿಮಗ ಮನೆಯಿಂದ ತಪ್ಪಿಸಿಕೊಂಡು ಹೊರಗಿದ್ದ. ಎಷ್ಟೋ ದಿನಗಳ ಕಾಲ ಅಪ್ಪನ ಕೆಲಸವನ್ನು ನಿರ್ವಹಿಸಿ, ಸಮಾಧಿಗೆ ಗುಂಡಿ ತೋಡುತ್ತ ಕಳೆದ. ತನ್ನ ಇಬ್ಬರು ತಮ್ಮಂದಿರು, ತಂದೆ, ಅಪ್ಪರು, ಒಡನಾಡಿಗಳೆಲ್ಲರ ಸಾಮೂಹಿಕ ಮಾರಣಹೋಮಕ್ಕೆ ಸಾಕ್ಷಿಯಾದ. ಕೊನೆಗೆ ತಾನೂ ಪ್ಲೇಗ್ ರೋಗಕ್ಕೆ ಬಲಿಯಾಗಿ ಬೇರೆಯವರಿಗೆ ಎಂದು ತೋಡಿದ ಹೊಂಡದಲ್ಲಿ ತಾನೂ ಸಾಮೂಹಿಕವಾಗಿ ಸಮಾಧಿಯಾದ.

ಆ ಬೀದಿಯ ಇಪ್ಪತ್ತು ಮನೆಗಳಲ್ಲಿ 12 ಮನೆಗಳಿಗೆ ಪ್ಲೇಗ್ ಅಮರಿಕೊಂಡಿತ್ತು. ಆ ಹನ್ನೆರಡು ಮನೆಗಳಲ್ಲಿ ಹನ್ನೊಂದು ಮನೆಗಳ ಒಳಗೆ ಕುಟುಂಬದವರನ್ನು ಸೇರಿಸಿ ಹೊರಗಿನಿಂದ ಬೀಗ ಜಡಿಯಲಾಗಿತ್ತು. ಆ ಬೀದಿಯ ಅರ್ಧಕ್ಕಿಂತ ಹೆಚ್ಚು ಜನರನ್ನು ಪ್ಲೇಗ್ ಮಾರಿ ನುಂಗಿ ನೊಣೆದಿತ್ತು. ಅದು ಮರಣಮೃದಂಗ ಬಾರಿಸಿ ಕುಣಿದು ದಣಿದು ತೇಗಿ ಎದ್ದು ಹೋದಾಗ ಅಲ್ಲಿ ಉಳಿದಿದ್ದು ಬರೀ 36 ಜನರು. ಎಷ್ಟೋ ಕುಟುಂಬಗಳೇ ನಾಶವಾಗಿದ್ದವು. ಕೆಲವೊಂದು ಮನೆಗಳಲ್ಲಿ ಹಿರಿಯರು ಮಕ್ಕಳನ್ನು ಕಳೆದುಕೊಂಡು ಜೀವಚ್ಛವವಾಗಿದ್ದರು. ಎಷ್ಟೋ ಮಕ್ಕಳಿಗೆ ತಮ್ಮ ತಂದೆ ತಾಯಿಯ ಶವಸಂಸ್ಕಾರ ಮಾಡುವ ಅವಕಾಶವೂ ಸಿಗಲಿಲ್ಲ. ಗಂಡ, ಹೆಂಡತಿ, ಪ್ರೇಮಿಗಳು, ವೃದ್ಧರು, ಸಂಬಂಧಿಗಳು, ಸ್ನೇಹಿತರು – ಹೀಗೆ ಕಣ್ಣೆದುರೇ ತಮ್ಮವರ ಅರೆಕೊಳೆತ ಶವಗಳನ್ನು ಎಳೆದುಕೊಂಡು ಹೋಗುವುದನ್ನು ನೋಡಿ ಅವರ ಮನಸ್ಸು ನಿಶ್ಚೇಷ್ಟಿತವಾಗಿಬಿಟ್ಟಿತ್ತು.




'ದಿ ಗ್ರೇಟ್ ಪ್ಲೇಗ್' ಸಾಕ್ಷ್ಯಚಿತ್ರ ಕಾಕ್ ಆ್ಯಂಡ್ ಕೀ ಅಲೇ ಬೀದಿಯ ಮನೆಯಮನೆಯಲ್ಲಿಯೂ ಕೇಳುತ್ತಿದ್ದ ನೋವಿನ ಆರ್ತನಾದವನ್ನು ನಿರೂಪಿಸುತ್ತಲೇ ಆಗಿನ ಕಾಲದ ಇಂಗ್ಲೆಂಡ್ ದೇಶದ ಪರಿಸ್ಥಿತಿಯನ್ನೂ ಕಟ್ಟಿಕೊಡುತ್ತ ಹೋಗುತ್ತದೆ. ಅಮೆರಿಕ–ಇಂಗ್ಲೆಂಡ್ ದೇಶದ ಇತಿಹಾಸತಜ್ಞರ ವಿವರಣೆ, ಸನ್ನಿವೇಶದ ಸಿನಿಮೀಯ ಮರುಸೃಷ್ಟಿಯ ಪ್ರಯತ್ನದ ಮೂಲಕ ಅಂದಿನ ಬಡ ಜನರ ಬದುಕಿನ ರೀತಿ, ಪ್ಲೇಗ್ ಮಾರಿ ಅವರನ್ನು ಹಿಂಡಿ ಹಿಂಸಿಸಿದ ಪರಿ, ಆಡಳಿತವರ್ಗದ ನಿರ್ಲಕ್ಷ್ಯ, ನಿಷ್ಕರುಣೆ ಎಲ್ಲವನ್ನೂ ಬಹುಸೂಕ್ಷ್ಮವಾಗಿ ಕಟ್ಟಿಕೊಡುತ್ತದೆ.

45 ವರ್ಷಗಳ ಹಿಂದೆ ಇಂಗ್ಲೆಂಡನ್ನು ಆವರಿಸಿದ 'ಪ್ಲೇಗ್' ಕರಾಳ ನೆನಪು ಬಹುತೇಕರ ಮನಸ್ಸಿಂದ ಮರೆಯಾಗಿಬಿಟ್ಟಿದೆ. ಆದರೆ ಅದಕ್ಕಿಂತ ಭಯಾನಕವಾಗಬಲ್ಲ ಕೊರೊನಾ ಹೊಡೆತಕ್ಕೆ ಜಗತ್ತೇ ತತ್ತರಿಸುತ್ತಿದೆ. ಮತ್ತೀಗ ಅದರ ಅಟ್ಟಹಾಸಕ್ಕೆ ಬಹುಪಾಲು ಬಲಿಯಾಗುತ್ತಿರುವುದು ಸಾಮಾನ್ಯ ಜನರೇ. ರೋಗವನ್ನು ಹಬ್ಬದಂತೆ ತಡೆಯಲು, ತಮ್ಮ ಪ್ರಾಣದ ಹಂಗು ತೊರೆದು ರೋಗಿಗಳ ಸುಶ್ರೂಷೆಗೆ ನಿಂತಿರುವ ವೈದ್ಯಕೀಯ ಸಿಬ್ಬಂದಿ ಅಗತ್ಯ ವೈದ್ಯಕೀಯ ಸಲಕರಣೆಗಳು ಮತ್ತು ಸುರಕ್ಷತಾ ಸಾಧನಗಳ ಕೊರತೆಯಿಂದ ಬಳಲುತ್ತಿರುವುದ ಸನ್ನಿವೇಶಕ್ಕೆ ನಾವೆಲ್ಲ ಸಾಕ್ಷಿಯಾಗಿದ್ದೇವೆ. ಇತಿಹಾಸದ ದುರಂತಗಳು ಮನುಷ್ಯನಲ್ಲಿ ವಿವೇಕ ಹುಟ್ಟಿಸುವುದಿಲ್ಲ; ಮನುಷ್ಯಕುಲದ ವಿಪತ್ತುಗಳು ಹೊಸ ಹೊಸ ವೇಷ ತೊಟ್ಟು ಬಂದು ಜನಸಾಮಾನ್ಯರ ಬದುಕಿಗೆ ತಪರಾಕಿ ಕೊಟ್ಟು ಹೋಗುವುದು ತಪ್ಪುವುದಿಲ್ಲ. ಮುಂದೊಂದು ದಿನ ಕೊರೊನಾ ದುರಂತಕ್ಕೆ ಸಂಬಂಧಿಸಿದಂತೆ ಸೃಜನಶೀಲನೊಬ್ಬ 'ದಿ ಗ್ರೇಟ್ ಕೊರೊನಾ' ಎನ್ನುವ ಸಾಕ್ಷ್ಯಚಿತ್ರ ರೂಪಿಸಿದರೆ ಅದರಲ್ಲಿ ಅಚ್ಚರಿಯೇನೂ ಇಲ್ಲ. ಆದರೆ, ಆ ಚಿತ್ರ 'ದಿ ಗ್ರೇಟ್ ಪ್ಲೇಗ್'ನಷ್ಟು ವಸ್ತುನಿಷ್ಠವಾಗಿರುತ್ತದೆಂದು ನಿರೀಕ್ಷಿಸುವುದು ಕಷ್ಟ.



2017 ಏಪ್ರಿಲ್ 1ರಂದು 'ಟೈಮ್‌ಲೈನ್' ಎಂಬ ಯೂಟ್ಯೂಬ್ ಚಾನಲ್‌ನಲ್ಲಿ ಬಿಡುಗಡೆಯಾದ 'ದಿ ಗ್ರೇಟ್ ಪ್ಲೇಗ್' ಎಂಬ ಸಾಕ್ಷ್ಯಚಿತ್ರವನ್ನು ಇದುವರೆಗೆ 38 ಲಕ್ಷಕ್ಕೂ ಅಧಿಕ ಜನರು ವೀಕ್ಷಿಸಿದ್ದಾರೆ.

ಈ ಸಾಕ್ಷ್ಯಚಿತ್ರವನ್ನು ವೀಕ್ಷಿಸಲು bit.ly/2Rhholi ಕೊಂಡಿ ಬಳಸಿ ಅಥವಾ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.